# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 456
ಸದಸ್ಯರ ಹೆಸರು : ಶ್ರೀ ಆರ್. ಧರ್ಮಸೇನ
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 06-03-2020

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರಿನಿಂದ ಮಳವಳ್ಳಿ ತಾಲ್ಲೂಕು ಬೆಳಕವಾಡಿಗೆ (ಟಿ.ನರಸೀಪುರದ ಮೂಲಕ) ಮತ್ತು ನಂಜನಗೂಡಿನಿಂದ ಬೆಳಕವಾಡಿಗೆ ಬಸ್‌ಗಳನ್ನು ಓಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ; | ಮೈಸೂರು-ತಿ.ನರಸೀಪುರ ಮಾರ್ಗದಲ್ಲಿ ಬೆಳಿಗ್ಗೆ 05.00 ರಿಂದ ರಾತ್ರಿ 19.30 ರವರೆಗೆ ಪ್ರತಿ 15 ನಿಮಿಷದಂತೆ ಸಾರಿಗೆ ಸೌಲಭ್ಯವಿದ್ದು, 19.30ರ ನಂತರ ಸಮಯ 19.30, 20.00, 20.15, 21.00, 21.30, 22.00 ಗಂಟೆಗೆ - ನಂಜನಗೂಡು-ಮೈಸೂರು ಮಾರ್ಗದಲ್ಲಿ ಬೆಳಿಗ್ಗೆ 05.00 ರಿಂದ ಸಂಜೆ 17.00 ರವರೆಗೆ ಪ್ರತಿ 15 ನಿಮಿಷದಂತೆ ಸಾರಿಗೆ ಸೌಲಭ್ಯವಿದ್ದು, 17.00 ರಿಂದ 21.00 ರವರೆಗೆ ಪ್ರತಿ 30 ನಿಮಿಷಕ್ಕೆ ಒಂದರಂತೆ ಸಾರಿಗೆಗಳು ಕಾರ್ಯಾಚರಣೆಯಲ್ಲಿರುತ್ತವೆ.<br><br>ಟಿ.ನರಸೀಪುರ-ಬೆಳಕವಾಡಿ ಮಾರ್ಗದಲ್ಲಿ ಬೆಳಿಗ್ಗೆ 11.00, 11.15 ಮತ್ತು 14.00 ಗಂಟೆಗೆ, ಬೆಳಕವಾಡಿ-ಮಳವಳ್ಳಿ ಮಾರ್ಗದಲ್ಲಿ ಬೆಳಿಗ್ಗೆ 05.15 ರಿಂದ 21.00 ರವರೆಗೆ ಪ್ರತಿ 30 ನಿಮಿಷಕ್ಕೆ ಒಂದರಂತೆ ಹಾಗೂ ಮಳವಳ್ಳಿ-ಮೈಸೂರು ಮಾರ್ಗದಲ್ಲಿ ಬೆಳಿಗ್ಗೆ 05.00 ರಿಂದರಾತ್ರಿ 20.00 ರವರೆಗೆ ಪ್ರತಿ 15 ನಿಮಿಷದಂತೆ ಸಾರಿಗೆ ಸೌಲಭ್ಯವಿದ್ದು, ನಂತರ ಸಮಯ 20.30 ಮತ್ತು 21.00ಕ್ಕೆ ಸಾರಿಗೆಗಳು ಕಾರ್ಯಾಚರಣೆಯಲ್ಲಿರುತ್ತದೆ.<br><br>ಸಾರ್ವಜನಿಕ ಪ್ರಯಾಣಿಕರು ವಾಹನ ಬದಲಾವಣೆ ಮಾಡಿಕೊಂಡು ಈ ಸಾರಿಗೆಗಳ ಸೌಲಭ್ಯ ಬಳಸಿಕೊಳ್ಳುತ್ತಿರುತ್ತಾರೆ. ಮೈಸೂರಿನಿಂದ ಮಳವಳ್ಳಿ ತಾಲ್ಲೂಕು ಬೆಳಕವಾಡಿಗೆ ಟಿ ನರಸೀಪುರದ ಮೂಲಕ ಮತ್ತು ನಂಜನಗೂಡಿನಿಂದ ಬೆಳಕವಾಡಿಗೆ ನೇರವಾಗಿ ಸಾರಿಗೆ ಕಾರ್ಯಾಚರಣೆ ಮಾಡುವ ಅವಶ್ಯಕತೆ ಕಂಡುಬರುವುದಿಲ್ಲ. |
| ಆ) | ಬೆಳಕವಾಡಿಯಲ್ಲಿ 20,000 ಜನಸಂಖ್ಯೆ ಇದ್ದು ಮೈಸೂರಿನಿಂದ ಬೆಳಕವಾಡಿಗೆ ಹಾಗೂ ನಂಜನಗೂಡಿನಿಂದ ಬೆಳಕವಾಡಿಗೆ ಬೆಳಿಗ್ಗೆ ಮತ್ತು ಸಂಜೆ ಎರಡೆರಡು ಬಸ್ಸುಗಳನ್ನು ಓಡಿಸಲು (ಟಿ. ನರಸೀಪುರದ ಮೂಲಕ) ಎಷ್ಟು ದಿವಸಗಳಲ್ಲಿ ಕ್ರಮ ಕೈಗೊಳ್ಳಲಾಗುವುದು; | ಪ್ರತಿನಿತ್ಯ ಮೈಸೂರಿನಿಂದ ಬೆಳಕವಾಡಿಗೆ ಹಾಗೂ ನಂಜನಗೂಡಿನಿಂದ ಬೆಳಕವಾಡಿಗೆ ನೇರ ನಿರೀಕ್ಷಿತ ಪ್ರಯಾಣಿಕರ ಸಾಂದ್ರತೆ ಕಡಿಮೆ ಇರುವ ಕಾರಣ ಬೆಳಿಗ್ಗೆ ಮತ್ತು ಸಂಜೆ ನೇರವಾಗಿ ಸಾರಿಗೆ ಕಾರ್ಯಾಚರಣೆ ಮಾಡಲಾಗುತ್ತಿಲ್ಲ. |
| ಇ) | ಬೆಳಕವಾಡಿಯಿಂದ ಮೈಸೂರಿಗೆ ಅಥವಾ ನಂಜನಗೂಡಿಗೆ ಹೋಗಬೇಕಾದರೆ ಕೊಳ್ಳೇಗಾಲಕ್ಕೆ ಅಥವಾ ಮಳವಳ್ಳಿಗೆ ಹೋಗಿ ನಂತರ ಇನ್ನೊಂದು ಬಸ್ಸಿನಲ್ಲಿ ಜನ ಪ್ರಯಾಣ ಮಾಡಬೇಕಾಗಿರುವುದರಿಂದ ನೇರವಾಗಿ ಬಸ್ಸಿನಲ್ಲಿ ಪ್ರಯಾಣ ಮಾಡಲು ಶೀಘ್ರವಾಗಿ ಅನುಕೂಲ ಮಾಡಿಕೊಡಲಾಗುವುದೆ? | |

ಸಂಖ್ಯೆ: ಟಿಡಿ 31 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು